# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 63 ಫ್ರಾ.ಸಾ. :48**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ವೀಣಾ ಪಿ. |
| ಗಂಡನ ಹೆಸರು | : | ಸುನಿಲ್ ಕುಮಾರ್ |
| ವಯಸ್ಸು | : | 37 ವರ್ಷ |
| ಕೆಲಸ | : | ಹಿರಿಯ ವೈಜ್ಞಾನಿಕ ಅಧಿಕಾರಿ, ವಿಷ ವಿಜ್ಞಾನ ವಿಭಾಗ ಆರ್.ಎಫ್.ಎಸ್.ಎಲ್., ಮಂಗಳೂರು. |
| ವಾಸ | : | ಮಂಗಳೂರು |

**ದಿನಾಂಕಃ 15-11-2024 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು 2014 ರಿಂದ 2019 ರವರೆಗೆ ವೈಜ್ಞಾನಿಕ ಅಧಿಕಾರಿಯಾಗಿ ಹಾಗೂ ಡಿಸೆಂಬರ್ 2019 ರಿಂದ ಇಲ್ಲಿಯ ವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್. ನಲ್ಲಿ ವಿಷ ವಿಜ್ಞಾನ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಇದುವರೆಗೂ ಸುಮಾರು 3000 ಪ್ರಕರಣಗಳಲ್ಲಿ ವಿಷ ವಿಜ್ಞಾನ ವಿಭಾಗಕ್ಕೆ ಬರುವ ವಸ್ತುಗಳನ್ನು ಪರೀಕ್ಷಿಸಿ, ವರದಿಗಳನ್ನು ನೀಡಿರುತ್ತೇನೆ ಹಾಗೂ ಇಲ್ಲಿಯ ವರೆಗೆ ಸುಮಾರು 62 ಪ್ರಕರಣಗಳಲ್ಲಿ ನಾನು ಸಾಕ್ಷಿ ನೀಡಿರುತ್ತೇನೆ.

2. ದಿ.15-11-2018 ರಂದು ಕಾರವಾರ ನಗರ ಪೊಲೀಸ್ ಠಾಣೆಯ ಗುನ್ನಾ ಸಂಖ್ಯೆಃ 141/2018 ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ-41 ಪ್ರಶಾಂತ್ ಡಿ. ಸಾವಂತ್ ರವರು 3 ಸೀಲಾದ ವಸ್ತುಗಳನ್ನು ನಮ್ಮ ಪ್ರಯೋಗಾಲಯಕ್ಕೆ ತಂದಿದ್ದು, ಅವುಗಳನ್ನು ನಮ್ಮ ಪ್ರಯೋಗಾಲಯದ ಸ್ವೀಕೃತಿ ವಿಭಾಗದವರು ಪಡೆದುಕೊಂಡು ನನಗೆ ನೀಡಿರುತ್ತಾರೆ. ಅವುಗಳನ್ನು ಪರಿಶೀಲಿಸಿದಾಗ ಸದರಿ ವಸ್ತುಗಳು ಸುಸ್ಥಿತಿಯಲ್ಲಿದ್ದು, ಅವುಗಳಿಗೆ ವಸ್ತು ಸಂಖ್ಯೆಃ 1,

2 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಹಾಗೂ ಸದರಿ ವಸ್ತುಗಳಿಗೆ ಹಾಕಿದ್ದ ಮೊಹರು ಸಹ ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು.

3. ಆನಂತರ ದಿಃ 18-12-2018 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ಮೊಹರು ಮಾಡಿದ ವಸ್ತುವನ್ನು ನಮ್ಮ ಆರ್.ಎಫ್.ಎಸ್.ಎಲ್. ನ ಜೀವ ಶಾಸ್ತ್ರ ವಿಭಾಗದದಿಂದ ಪರೀಕ್ಷೆಗಾಗಿ ಪಡೆದಕೊಂಡಿರುತ್ತೇನೆ. ಸದರಿ ವಸ್ತುಗೆ ವಸ್ತು ಸಂಖ್ಯೆ 3 ಎಂದು ಗುರುತಿಸಲಾಗಿರುತ್ತದೆ. ವಸ್ತು ಸಂಖ್ಯೆ 3 ನ್ನು ಪರಿಶೀಲಿಸಿ ನೋಡಿದಾಗ, ಸದರಿ ವಸ್ತುವನ್ನು ನಮ್ಮ ಜೀವಶಾಸ್ತ್ರ ವಿಭಾಗದವರು ಮೊಹರು ಮಾಡಿ ನೀಡಿದ್ದು, ಅದು ಸುಸ್ಥಿತಿಯಲ್ಲಿ ಇತ್ತು ಹಾಗೂ ಅದರ ಮೇಲೆ ಇದ್ದ ಮೊಹರು ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ವಸ್ತು ಸಂಖ್ಯೆ 1, 2 ಮತ್ತು 3 ರ ಮೇಲೆ ಹಾಗೂ ಅದಕ್ಕೆ ಸಂಬಂಧಿಸಿದ ಪಿ.ಎಂ.ಆರ್. (preliminary post morterm report) ನಲ್ಲಿ ಪ್ರೇಮ್ ಕುಮಾರ್, 44 ವರ್ಷ ಎಂದು ನಮೂದಿಸಲಾಗಿತ್ತು. ವಸ್ತು ಸಂಖ್ಯೆ 4 ನ್ನು ಸಂರಕ್ಷಣೆಯಲ್ಲಿಡಲಾಗಿತ್ತು. ಸದರಿ ವಸ್ತುಗಳನ್ನು ತೆರೆದು ನೋಡಿದಾಗ, ವಸ್ತು ಸಂಖ್ಯೆ 1 ರಲ್ಲಿ Portion of stomach and its contents, portion of small intestine and its contents, ವಸ್ತು ಸಂಖ್ಯೆ 2 ರಲ್ಲಿ pieces of liver and kidney, ವಸ್ತು ಸಂಖ್ಯೆ 3 ರಲ್ಲಿ blood, ವಸ್ತು ಸಂಖ್ಯೆ 4 ರಲ್ಲಿ preservative saturated solution of sodium chloride ಇದ್ದವು.

4. ಮೇಲೆ ಹೇಳಿದ 4 ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೊಳಪಡಿಸಿ, ನನ್ನ ವರದಿಯನ್ನು ನೀಡಿರುತ್ತೇನೆ. ನಾನು ನೀಡಿದ ವರದಿಯ ಪ್ರಕಾರ, ನನ್ನ ಅಭಿಪ್ರಾಯವವು ಈ ಕೆಳಗಿನಂತೆ ಇರುತ್ತದೆ.

> "Colour tests, Gas chromatography, UV–Vis spectrophotometry and Thin layer chromatographic methods of analysis have not responded for the presence of residues of ethyl alcohol, volatile poisons, pesticides, barbiturates, benzodiazepines, toxic metal ions and anions in all the above stated articles."

ಸಾಕ್ಷಿಯು ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-123 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-123(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

5. ನಮ್ಮ ಪ್ರಯೋಗಾಲಯಕ್ಕೆ ಬಂದ ವಸ್ತುಗಳ ಪರೀಕ್ಷೆಯ ನಂತರ ನಿಪಿ-123 ವರದಿಯನ್ನು ನಾನು ನಮ್ಮ ಪ್ರಯೋಗಾಲಯದ ರವಾನೆ ವಿಭಾಗ (Dispatch Section) ಗೆ ನೀಡಿರುತ್ತೇನೆ. ಆನಂತರ ಅವರು ಸದರಿ ವರದಿಯನ್ನು ಕಾರವಾರ ನಗರ ಪೊಲೀಸರಿಗೆ ನೀಡಿರುತ್ತಾರೆ. 2018 ರ ಡಿಸೆಂಬರ್ ತಿಂಗಳಿನಲ್ಲಿ ನಾನು ಪ್ರಭಾರ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ವಸ್ತು ಸಂಖ್ಯೆಃ 1, 2 ಮತ್ತು 4 ವಸ್ತುಗಳನ್ನು ದಿ.18-11-2018 ರಂದು ಪರೀಕ್ಷೆಗೆ ತೆಗೆದುಕೊಂಡಿರುತ್ತೇನೆ. ಸದರಿ ದಿನದಂದು ಪರೀಕ್ಷೆಗೆ ತೆಗೆದುಕೊಂಡ ಬಗ್ಗೆ ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ಪ್ರಯೋಗಾಲಯದಲ್ಲಿ ಯಾವುದೇ ವಸ್ತುಗಳನ್ನು ತೆಗೆದುಕೊಂಡಾಗ ಸಂಪೂರ್ಣ ವಿವರವನ್ನು, ನಮ್ಮ Observation sheet ನಲ್ಲಿ ನಮೂದಿಸುತ್ತೇವೆ ಎಂದು ನುಡಿಯುತ್ತಾರೆ. ವಸ್ತು ಸಂಖ್ಯೆಃ 1 ರಿಂದ 4 ವಸ್ತುಗಳನ್ನು ಒಟ್ಟಿಗೇ ಪರೀಕ್ಷೆಗೆ ತೆಗೆದುಕೊಂಡಿದ್ದೀರಾ? ಎಂದರೆ ಸಾಕ್ಷಿಯು, ವಸ್ತು ಸಂಖ್ಯೆಃ 1, 2, ಮತ್ತು 4 ವಸ್ತುಗಳನ್ನು ಮೊದಲಿಗೆ ಪರೀಕ್ಷೆಗೆ ತೆಗೆದುಕೊಂಡಿರುತ್ತೇನೆ. ಆನಂತರ 3 ನೇ ವಸ್ತುವನ್ನು ಪರೀಕ್ಷೆಗೆ ತೆಗೆದುಕೊಂಡಿರುತ್ತೇನೆ.

6. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೃತನಾದಾಗ ಆತನ ಶರೀರ ಕೊಳೆಯುವವರೆಗೆ ಆತನ ಶರೀರದಲ್ಲಿ ಮದ್ಯ ಸಾರದ ಅಥವಾ ವಿಷದ ಅಂಶ ಇರುತ್ತದೆ. ವಸ್ತು ಸಂಖ್ಯೆಃ 1 ಮತ್ತು 2 ಗಳು ಹಾಳಾದ ಸ್ಥಿತಿಯಲ್ಲಿದ್ದವಾ ಅಥವಾ ತಾಜಾ ಇದ್ದವಾ ಎಂಬ ಪ್ರಶ್ನೆಗೆ ಸಾಕ್ಷಿಯು, ಕಳುಹಿಸಿದಂತಹ ವಸ್ತುಗಳಲ್ಲಿ ಅದರ ಅಂಗಾಂಶವನ್ನು ಸಂರಕ್ಷಣಾ ಸ್ಥಿತಿಯಲ್ಲಿ ಕಳುಹಿಸಿದ್ದರಿಂದ, ಅವುಗಳು ತಾಜಾ ಸ್ಥಿತಿಯಲ್ಲಿದ್ದವು ಎಂದು ನುಡಿಯುತ್ತಾರೆ. ಒಂದು ಶವವು 8 ದಿನಗಳ ನಂತರ ಸಂಪೂರ್ಣ

ಕೊಳೆತ ಸ್ಥಿತಿಗೆ ತಲುಪುತ್ತದೆ ಎಂದರೆ ಸಾಕ್ಷಿಯು, ಹವಾಮಾನ ಮತ್ತು ವಾತಾವರಣದ ಮೇಲೆ ಅವಲಂಬಿತವಾಗಿರುತ್ತದೆ ಎಂದು ನುಡಿಯುತ್ತಾರೆ. ವಸ್ತು ಸಂಖ್ಯೆ 3 ರಕ್ತವು ರಾಸಾಯನಿಕ ಪರೀಕ್ಷೆಗೊಳಪಡಿಸಲು ಯೋಗ್ಯವಾಗಿತ್ತು. ವಸ್ತು ಸಂಖ್ಯೆ 1 ರಿಂದ 4 ವಸ್ತುಗಳು ನಮ್ಮ ಪ್ರಯೋಗಾಲಯಕ್ಕೆ ಬಂದಿರುವುದಿಲ್ಲ ಮತ್ತು ನಾನು ಯಾವುದೇ ಪರೀಕ್ಷೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿಯನ್ನು ತಯಾರಿಸಿ, ಸಹಿ ಮಾಡಿ ನೀಡಿರುತ್ತೇನೆ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಪರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.